# ಬೆಂಗಳೂರು ಬ್ಯಾಪ್ಟಿಸ್ಟ್ ಆಸ್ಪತ್ರೆ



**ಬೆಂಗಳೂರು ಬ್ಯಾಪ್ಟಿಸ್ಟ್ ಆಸ್ಪತ್ರೆಯಲ್ಲಿನ 'ಮಧುಮೇಹ ಹಾಗೂ ಎಂಡೋಕ್ರೈನಾಲಜಿ' ವಿಭಾಗವು ಹಾರ್ಮೋನ್ ವೈಪರೀತ್ಯಗಳನ್ನು ಸರಿಪಡಿಸಲು ಸುಸಜ್ಜಿತವಾಗಿದೆ. ಈ ವಿಭಾಗವು ಮಕ್ಕಳಲ್ಲಿ ಹಾಗೂ ವಯಸ್ಕರಲ್ಲಿ ಉಂಟಾಗುವ ಹಾರ್ಮೋನ್ ವ್ಯತ್ಯಾಸಗಳನ್ನು ಸರಿಪಡಿಸುವ ನಿಪುಣ ವೈದ್ಯ ತಜ್ಞರನ್ನು ಒಳಗೊಂಡಿದೆ.**

### ಡಯಾಬಿಟಿಸ್ (ಮಧುಮೇಹ)

ಭಾರತದಲ್ಲಿ ಪ್ರತಿ 100 ರಲ್ಲಿ 9 ಮಂದಿಗೆ ಮಧುಮೇಹ ಕಂಡು ಬರುತ್ತಿದೆ. ಮಧುಮೇಹ ರೋಗದಿಂದ ರೆಟಿನಾ ತೊಂದರೆ, ನರದೌರ್ಬಲ್ಯ, ಕಿಡ್ನಿ ತೊಂದರೆ, ಲೈಂಗಿಕ ದೌರ್ಬಲ್ಯ ಉಂಟಾಗ ಬಹುದು. ಹೃದಯಾಘಾತ ಹಾಗೂ ಗ್ಯಾಂಗ್ರೀನ್ ಮಧುಮೇಹಿಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಇವುಗಳನ್ನು ಪ್ರಾರಂಭಿಕ ಹಂತದಲ್ಲೇ ಪತ್ತೆಹಚ್ಚಿ, ರೋಗ ಉಲ್ಬಣಗೊಳ್ಳದಂತೆ ತಡೆಗಟ್ಟಲು 'ಡಯಾಬಿಟಿಸ್ ಪ್ಯಾಕೇಜ್'ನ ಸೌಲಭ್ಯವಿದೆ. ರಕ್ತ ಪರೀಕ್ಷೆ, ರೆಟಿನಾ ಪರೀಕ್ಷೆ, ಹೃದಯ ಸಂಬಂಧೀ ಪರೀಕ್ಷೆ, ಪಾದ ಸಂರಕ್ಷಣೆ, ಆಹಾರ-ಪಥ್ಯ, ಡಯಾಬಿಟಿಸ್‌ನ ಬಗ್ಗೆ ಮಾಹಿತಿ ಮತ್ತು ತಜ್ಞ ವೈದ್ಯರೊಂದಿಗೆ ಸಮಾಲೋಚನೆಯನ್ನು ಈ ಪ್ಯಾಕೇಜ್ ಒಳಗೊಂಡಿದೆ.

### ಪಿಟ್ಯುಟರಿ ಗ್ರಂಥಿಯ ತೊಂದರೆಗಳು

ಈ ಗ್ರಂಥಿಯ ತೊಂದರೆಯಿದ್ದಲ್ಲಿ ಕುಬ್ಜತೆ/ ಅತಿ ಎತ್ತರದ ಬೆಳವಣಿಗೆ, ತೂಕ ಹೆಚ್ಚಳ, ಋತು ಚಕ್ರಗಳಲ್ಲಿ ಏರುಪೇರು ಉಂಟಾಗಬಹುದು. ಇದನ್ನು ನಿಖರವಾಗಿ ಪತ್ತೆ ಹಚ್ಚಲು ಬೇಕಾಗುವ ಹಾರ್ಮೋನ್ ಮಾಪಕ ಹಾಗೂ MRI ಸೌಲಭ್ಯಗಳು ನಮ್ಮಲ್ಲಿವೆ.

### ಥೈರಾಯಿಡ್ ಗ್ರಂಥಿಯ ಸಮಸ್ಯೆಗಳು

ಬಹು ಸಾಮಾನ್ಯವಾಗಿ ಕಂಡು ಬರುವ ಈ ಸಮಸ್ಯೆಯಿಂದ ಅತಿಯಾದ ಸುಸ್ತು, ತೂಕ ಹೆಚ್ಚು/ಕಡಿಮೆಯಾಗುವುದು ಮತ್ತು ಬಂಜೆತನ ಕಂಡು ಬರಬಹುದು. ಕೆಲವೊಮ್ಮೆ ಥೈರಾಯಿಡ್ ಗ್ರಂಥಿಯಲ್ಲಿ ಗಡ್ಡೆಗಳು ಕಾಣಿಸಿಕೊಳ್ಳಬಹುದು. ಇವುಗಳನ್ನು ಶಸ್ತ್ರಚಿಕಿತ್ಸೆಯ ಮೂಲಕ ಗುಣಪಡಿಸ ಬೇಕಾದಲ್ಲಿ, ನಮ್ಮಲ್ಲಿ ನಿಪುಣ ಶಸ್ತ್ರ ಚಿಕಿತ್ಸಾ ವೈದ್ಯರ ತಂಡವಿದೆ.

### ಅಡ್ರೀನಲ್ ಗ್ರಂಥಿಯ ತೊಂದರೆಗಳು

ಈ ಗ್ರಂಥಿಯಲ್ಲಿ ಹೆಚ್ಚು ಹಾರ್ಮೋನ್ ಉತ್ಪತ್ತಿಯಾದಲ್ಲಿ ಅತಿ ರಕ್ತದೊತ್ತಡ, ತೂಕ ಹೆಚ್ಚಾಗುವಿಕೆ ಕಂಡು ಬರಬಹುದು. ಹಾಗೆಯೇ ಅಡ್ರೀನಲ್ ಹಾರ್ಮೋನ್ ಕಡಿಮೆ ಉತ್ಪತ್ತಿಯಾದಲ್ಲಿ ಸುಸ್ತು ಹಾಗು ತೂಕ ಕಡಿಮೆಯಾಗಬಹುದು.

### ಆಸ್ಟಿಯೋ ಪೊರೋಸಿಸ್ ಮತ್ತು ಮೂಳೆಯ ತೊಂದರೆಗಳು

ವೃದ್ಧರಲ್ಲಿ, ಹೆಚ್ಚಾಗಿ ಹೆಂಗಸರಲ್ಲಿ ಆಸ್ಟಿಯೋ ಪೊರೋಸಿಸ್ (ಮೂಳೆ ಸವೆತ) ಒಂದು ಮಾರಕ ರೋಗವಾಗಿದೆ. ಇದನ್ನು DEXA ಸ್ಕ್ಯಾನಿಂಗ್ ಮೂಲಕ ಪತ್ತೆ ಹಚ್ಚುವ ಸೌಲಭ್ಯ ನಮ್ಮಲ್ಲಿದೆ. ಇದಲ್ಲದೇ ವಿಟಮಿನ್ 'ಡಿ'ಯ ಕೊರತೆ, ರಿಕೆಟ್ಸ್, ಆಸ್ಟಿಯಾ ಮಲೇಸಿಯಾ ಮುಂತಾದ ಹಾರ್ಮೋನ್ ಸಂಬಂಧಿತ ಎಲುಬಿನ ತೊಂದರೆಯನ್ನು ಗುಣಪಡಿಸುವ ಸೌಲಭ್ಯ ಬ್ಯಾಪ್ಟಿಸ್ಟ್ ಆಸ್ಪತ್ರೆಯಲ್ಲಿ ಉಪಲಬ್ಧವಿದೆ.

## ಚಿಕಿತ್ಸೆ ಹಾಗೂ ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ : ಬೆಂಗಳೂರು ಬ್ಯಾಪ್ಟಿಸ್ಟ್ ಆಸ್ಪತ್ರೆ


**ಡಾ॥ ಸ್ಪರ್ಜನ್**
MD, DNB (Endo-CMC Vellore)
Clinical Fellowship in Endocrine - UK

**ಡಾ॥ ಸುಮನ್ ರಥ್**
MBBS, DNB (Paeds)
Fellowship in Ped. Endocrinology

**ಡಾ॥ ಕೆ.ಜೆ. ಶೆಟ್ಟಿ**
MD, FRCP, MRCP

**ಡಾ॥ ಭಾರ್ಗವಿ**
MBBS, Diploma in Diabetes(UK),
PG Diploma in Diabetes


**Launching Diabetes Annual Package - For more details call +91 9449862628**

Bangalore Baptist Hospital
Quality with Compassion since 1973


**Endocrinology and Diabetes Unit**
Bangalore Baptist Hospital
Bellary Road, Hebbal, Bangalore - 560024
Ph: 22024700 | Email: talk2us@bbh.org.in
Visit us: www.bbh.org.in